**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**
**ಸಿ. ಸಿ. ನಂ. 23/2024**

ಸಿಡಬ್ಲ್ಯೂ-08
ಪಿಡಬ್ಲ್ಯೂ-04

| | |
|---|---|
| ಸಾಕ್ಷಿದಾರರ ಹೆಸರು | ಅಜ್ಜನಗೌಡ ಕರೆಗೌಡ್ರ |
| ತಂದೆ ಹೆಸರು | ಬಸನಗೌಡ |
| ವಯಸ್ಸು | 49 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಗಡಿಯಂಕಣಹಳ್ಳಿ ಗ್ರಾಮ |

**ದಿನಾಂಕ : 21-12-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-1 ನನ್ನ ಮಾವ, ಚಾಸಾ-4 ಮತ್ತು 5 ರವರ ಪರಿಚಯಇದ್ದು, ಅವರು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಾರೆ. ಚಾಸಾ-7 ರವರ ಪರಿಚಯ ಇರುವುದಿಲ್ಲ.

2. ನಾನು ಸುಮಾರು 7 ವರ್ಷಗಳ ಹಿಂದಿನಿಂದಲೂ ಚಾಸಾ-1 ರವರಿಗೆ ಸಂಬಂಧಿಸಿದ ಜಮೀನನ್ನು ಲಾವಣಿ ಆಧಾರದ ಮೇಲೆ ವ್ಯವಸಾಯ ಮಾಡುತ್ತಿದ್ದೆ. ಚಾಸಾ-1 ರವರ ಉಳಿದ ಜಮೀನನ್ನು ವಹಿವಾಟು ಮಾಡಲು ಚಾಸಾ-4 ಮತ್ತು 5 ರವರನ್ನು ಕೆಲಸಗಾರರಾಗಿ ನೇಮಿಸಿದ್ದರು. ಸದರಿ ಚಾಸಾ-4 ಮತ್ತು 5 ರವರು ಜಮೀನನ್ನು ವಹಿವಾಟು ಮಾಡುವ ಉದ್ದೇಶಕ್ಕೆ ಅದೇ ಜಮೀನಿನಲ್ಲಿದ್ದ ಹಳೇ ಮನೆಯಲ್ಲಿ ವಾಸವಿದ್ದರು. ಹೀಗಿದ್ದಾಗ ದಿಃ 18-09-2023 ರಂದು ಬೆಳಗ್ಗೆ 10.00 ಗಂಟೆ ಸುಮಾರಿಗೆ ಚಾಸಾ-1 ರವರ ಸಹೋದರರಾದ ಚನ್ನಬಸಪ್ಪ, ನಾಗಪ್ಪ, ಚನ್ನಬಸಪ್ಪನ ಹೆಂಡತಿ ಮತ್ತು ಮತ್ತೊಬ್ಬರು ಜಮೀನಿಗೆ ಬಂದಿರುತ್ತಾರೆ. ಆಗ ಚಾಸಾ-4 ಮತ್ತು 5

ರವರಿಗೆ ಮನೆಯನ್ನು ಖಾಲಿ ಮಾಡುವಂತೆ ಬೆದರಿಕೆ ಹಾಕಿ ಖಾಲಿ ಮಾಡದಿದ್ದಲ್ಲಿ ಜೆ.ಸಿ.ಬಿ ಯಿಂದ ನೆಲಸಮ ಮಾಡುತ್ತೇವೆ ಎಂದು ಬೆದರಿಸಿದ್ದರು. ನಾನು ಲಾವಣಿ ಆಧಾರದ ಮೇಲೆ ಮಾಡುತ್ತಿದ್ದ ಜಮೀನಿನಲ್ಲಿ ಗೋವಿನ ಜೋಳದ ಫಸಲನ್ನು ಬೆಳೆದಿದ್ದು, ಅದನ್ನು ಮುರಿಯಲು ಬರುವ ಅವಶ್ಯಕತೆ ಇಲ್ಲ ಎಂದು ಸದರಿ ಆರೋಪಿಗಳು ನನಗೆ ಹೇಳಿರುತ್ತಾರೆ. ಸದರಿ ಸಂಗತಿಗಳನ್ನು ನಾನು ಚಾಸಾ-1 ರವರಿಗೆ ತಿಳಿಸಿದ್ದು, ಅದರಂತೆ ದಿಃ 19-09-2023 ರಂದು ಚಾಸಾ-1 ರವರು ಬಂದು ಘಟನೆಗೆ ಸಂಬಂಧಿಸಿದಂತೆ ಆಡೂರು ಪೊಲೀಸ್ ಠಾಣೆಯಲ್ಲಿ ಪಿರ್ಯಾದನ್ನು ಸಲ್ಲಿಸಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ತನಿಖಾಧಿಕಾರಿಗೆ ನನ್ನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ 4 ಜನ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

1. 1 ಮತ್ತು 2 ನೇ ಆರೋಪಿಗಳೊಂದಿಗೆ ಘಟನೆಯ ದಿನದಂದು ಬಂದಿದ್ದ 3 ಮತ್ತು 4 ನೇ ಆರೋಪಿಗಳ ಹೆಸರು ಚೆನ್ನಪ್ಪಗೌಡ ಸಾವಕ್ಕನವರ ಮತ್ತು ಅಕ್ಕಮ್ಮ ಕೋಂ ಚೆನ್ನಪ್ಪಗೌಡ ಸಾವಕ್ಕನವರ ಎಂದರೆ ಸರಿ. ಘಟನೆಯ ದಿನ ಮತ್ತು ಸಮಯದಲ್ಲಿ ಆರೋಪಿಗಳೆಲ್ಲರೂ ಚಾಸಾ-1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಚಾಸಾ-4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದರು ಎಂದರೆ ಸರಿ. ಜಮೀನು ಮತ್ತು ಮನೆಯನ್ನು ಖಾಲಿ ಮಾಡದಿದ್ದಲ್ಲಿ ಜೀವಂತ ಬಿಡುವುದಿಲ್ಲ ಎಂದು ಚಾಸಾ-4 ಮತ್ತು 5 ರವರಿಗೆ ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿ. ನಾನು ಲಾವಣಿ ಆಧಾರದ ಮೇಲೆ ವಹಿವಾಟಿಸುತ್ತಿದ್ದ ಜಮೀನಿನಲ್ಲಿ ಬೆಳೆದಿದ್ದ ಗೋವಿನ ಜೋಳವನ್ನು ಕಟಾವು ಮಾಡಿದ್ದಲ್ಲಿ ಜೀವ ಸಹಿತ ಉಳಿಸುವುದಿಲ್ಲ ಎಂದು ನನಗೂ ಸಹ ಆರೋಪಿಗಳು ಬೆದರಿಕೆ ಹಾಕಿದ್ದರು ಎಂದರೆ ಸರಿ.

<u>**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎನ್.ಎಂ.ಎಸ್ ವಕೀಲರಿಂದ**</u>

1. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ನೇ ಆರೋಪಿಯು ಹೊಂಬರಡಿ ಗ್ರಾಮದಲಿ ವಾಸವಿದ್ದಾರೆ. ಚಾಸಾ-1 ರವರು ಹುಬ್ಬಳ್ಳಿಯಲ್ಲಿ ವಾಸವಿದ್ದಾರೆ. ದಿಃ18-09-2023 ರಂದು ಘಟನಾ ಸಮಯದಲ್ಲಿ ನಾನು ಗಡಿಯಂಕನಹಳ್ಳಿ ಗ್ರಾಮದಿಂದ ಬರುತ್ತಿದ್ದೆ. ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ ಆರೋಪಿಗಳು ಘಟನಾ ಸ್ಥಳದಲ್ಲಿ ಇರಲಿಲ್ಲ. ಘಟನೆಯಲ್ಲಿ ಆರೋಪಿಗಳು ಚಾಸಾ-4 ಮತ್ತು 5 ರವರಿಗೆ ಹೆದರಿಸಿದ ಬಗ್ಗೆ ಮತ್ತು ವಿವಾದಿತ ಜಮೀನಿಗೆ ಬಂದಿದ್ದ ಬಗ್ಗೆ ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು, ಘಟನೆ ಆದ ನಂತರ ನಾನು ಹೋದಾಗ ಘಟನೆ ಬಗ್ಗೆ ಚಾಸಾ-4 ಮತ್ತು 5 ರವರು ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ.

2. ಚಾಸಾ-1 ರವರು ನನ್ನ ಹಿರಿಯ ಸಹೋದರಿಯ ಗಂಡ. ಘಟನೆ ಆದ ಜಮೀನಿನ ಸರ್ವೇ ನಂಬರ್ ಗೋಂದಿ ಗ್ರಾಮದ ಸ ನಂಃ 10/1. ಸದರಿ ಜಮೀನು ಒಟ್ಟಿಗೆ 14 ಎಕರೆ ವಿಸ್ತೀರ್ಣ ಇದೆ. ಸದರಿ ಒಟ್ಟು ವಿಸ್ತೀರ್ಣದ ಪೈಕಿ ನಾನು 10 ಎಕರೆ ಜಮೀನಿನಲ್ಲಿ ಗೋವಿನ ಜೋಳ ಬೆಳೆದಿದ್ದೆ. ಯಾವ ಜಮೀನಿನಲ್ಲಿ ಘಟನೆ ಆಗಿದೆ ಎಂದು ಆಧರಿಸಿರುವ ಜಮೀನಿನ ಸ ನಂಃ 110 ಎಂದರೆ ಸರಿಯಲ್ಲ. ಸ ನಂಃ 110 ರ ಜಮೀನನ್ನು ಹಿಸ್ಸೇಗೆ ಸಂಬಂಧಿಸಿದಂತೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ, ಹಾನಗಲ್ಲ ನ್ಯಾಯಾಲಯದಲ್ಲಿ ಅಸಲು ದಾವಾ ಸಂಃ 81/2023 ರ ದಾವೆಯನ್ನು ಚಾಸಾ-4 ಮತ್ತು ಸಂಗಡಿಗರು ಚಾಸಾ-1 ರವರ ವಿರುದ್ದ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಗೊತ್ತಿಲ್ಲ.

3. ಸ ನಂಃ 10 ರ ಜಮೀನನ್ನು ನಾನು ಲಾವಣಿ ಆಧಾರದ ಮೇಲೆ ವಹಿವಾಟು ಮಾಡುತ್ತಿರುವ ಬಗ್ಗೆ ಲಿಖಿತ ದಾಖಲೆಗಳು ಇರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಬಂದಾಗ ಬೆಳಗ್ಗೆ 11 ರ ಸಮಯವಾಗಿತ್ತು. ನಾನು ಘಟನಾ ಸ್ಥಳಕ್ಕೆ ಬಂದಾಗ ಚಾಸಾ-4 ಮತ್ತು 5

ರವರು ಮಾತ್ರ ಇದ್ದರು. ನಾನು ದೂರವಾಣಿ ಮೂಲಕ ಚಾಸಾ-1 ರವರಿಗೆ ಘಟನೆ ಬಗ್ಗೆ ತಿಳಿಸಿದಾಗ ಅವರು ಗೋಂದಿ ಗ್ರಾಮಕ್ಕೆ ಘಟನೆ ಆದ ಮಾರನೇ ದಿನ ಬೆಳಗ್ಗೆ 10 ಗಂಟೆ ಸುಮಾರಿಗೆ ಬಂದಿರುತ್ತಾರೆ. 4 ನೇ ಆರೋಪಿಗೆ ಸದರಿ ವಿವಾದಿತ ಜಮೀನಿನಲ್ಲಿ ಹಿಸ್ಸೇಯ ಹಕ್ಕು ಇದ್ದು, ಅದನ್ನು ನಷ್ಟಗೊಳಿಸಲು ಯಾವುದೇ ಘಟನೆ ನಡೆಯದಿದ್ದರೂ ಚಾಸಾ-1 ರವರು ನೀಡಿರುವ ಸುಳ್ಳು ಪಿರ್ಯಾದಿಗೆ ಅನುಗುಣವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 18-09-2023 ರಂದು ಬೆಳಗ್ಗೆ 10.00 ಗಂಟೆಗೆ ಆರೋಪಿಗಳು ವಿವಾದಿತ ಜಮೀನನ್ನು ಅಕ್ರಮ ಪ್ರವೇಶ ಮಾಡಿ, ಚಾಸಾ-4 ಮತ್ತು 5 ರವರಿಗೆ ಜಮೀನನ್ನು ಮತ್ತು ಮನೆಯನ್ನು ಖಾಲಿ ಮಾಡುವಂತೆ ಹೆದರಿಸಿ, ಜೀವ ಬೆದರಿಕೆ ಹಾಕಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಘಟನಾ ದಿನ ಮತ್ತು ಸಮಯದಲ್ಲಿ ಘಟನಾ ಸ್ಥಳಕ್ಕೆ ಬಂದಿರಲೇ ಇಲ್ಲ ಮತ್ತು ನನಗೂ ಜೀವ ಬೆದರಿಕೆ ಹಾಕಿರಲಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ